## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಜಮುನಾ ವಿವಿದೋದ್ದೇಶಗಳ ಸಹಕಾರ ಸಂಘ ನಿ. ವಿಜಾಪುರ ಹಾಗೂ ಅಖಿಲ ಕರ್ನಾಟಕ ಜನಸೇವಾ ಸಂಘ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್(ರಿ) ಚಿತ್ರದುರ್ಗ, ಈ ಸಂಸ್ಥೆಗಳಿಗೆ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡಲು ನೀಡಿರುವ ಆದೇಶಗಳನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 153 ವಿಸೇಬಿ 2021, ದಿ:16.11.2021.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 11 ವಿಸೇಬಿ 2021, ದಿ:25.11.2021.

*****

**ಪ್ರಸ್ತಾವನೆ :-**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿನ ಬೆಳಗಾವಿ ಹಾಗೂ ಕಲಬುರಗಿ** ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧೀನ ಕಛೇರಿಗಳಲ್ಲಿನ ಹಳೆಯ ಅನುಪಯುಕ್ತ ಸಾಮಾಗ್ರಿಗಳನ್ನು ಜಮುನಾ ವಿವಿದೋದ್ದೇಶಗಳ ಸಹಕಾರ ಸಂಘ ನಿ. ವಿಜಯಪುರ ಇವರಿಗೆ ಮತ್ತು **ಬೆಂಗಳೂರು ಹಾಗೂ ಮೈಸೂರು ವಿಭಾಗಗಳ** ಅಧೀನದಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿನ ಅಧೀನ ಕಛೇರಿಗಳಲ್ಲಿನ ಹಳೆಯ ಅನುಪಯುಕ್ತ ಸಾಮಗ್ರಿಗಳನ್ನು ಅಖಿಲ ಕರ್ನಾಟಕ ಜನಸೇವಾ ಸಂಘ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ (ರಿ), ಆಜಾದ್ ನಗರ, ಚಿತ್ರದುರ್ಗ ಇವರಿಗೆ ಕೆಲವು ಷರತ್ತುಗಳೊಂದಿಗೆ 02(ಎರಡು) ವರ್ಷಗಳ ಅವಧಿಗೆ ವಿಲೇವಾರಿ ಮಾಡಲು ಅನುಮತಿ ನೀಡಿ ಕ್ರಮವಾಗಿ ಮೇಲೆ ಕ್ರಮ ಸಂಖ್ಯೆ (01) & (02)ರಲ್ಲಿ ಓದಲಾದ ಆದೇಶಗಳನ್ನು ಹೊರಡಿಸಲಾಗಿತ್ತು.

ಆದರೆ, ರಾಜ್ಯದ ಎಲ್ಲಾ ನಾಲ್ಕು ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಅಧೀನ ಕಛೇರಿಗಳಲ್ಲಿನ ಹಳೆಯ ಅನುಪಯುಕ್ತ ವಸ್ತುಗಳು/ಸಾಮಗ್ರಿಗಳನ್ನು ಯಾವುದೇ ನಿರ್ದಿಷ್ಟ ಸಂಸ್ಥೆಗಳಿಗೆ ನೇರವಾಗಿ ನಿರ್ದಿಷ್ಟ ದರಕ್ಕೆ ವಿಲೇವಾರಿ ಮಾಡಲು ಅನುಮತಿ ನೀಡುವ ಬದಲು ಅದನ್ನು ಸ್ಪರ್ಧಾತ್ಮಕ ದರಕ್ಕೆ ಅನುಗುಣವಾಗಿ ಈ-ಟೆಂಡರ್ ಮೂಲಕ ಆಯಾ ಜಿಲ್ಲಾ ಪಂಚಾಯಿತಿಗಳ ಹಂತದಲ್ಲಿ ವಿಲೇವಾರಿ ಮಾಡುವುದು ಸೂಕ್ತವಾಗಿರುತ್ತದೆಂದು ಸರ್ಕಾರವು ನಿರ್ಣಯಿಸಿರುತ್ತದೆ. ಆದ್ದರಿಂದ, ಜಮುನಾ ವಿವಿದೋದ್ದೇಶಗಳ ಸಹಕಾರ ಸಂಘ ನಿ. ವಿಜಯಪುರ ಹಾಗೂ ಅಖಿಲ ಕರ್ನಾಟಕ ಜನಸೇವಾ ಸಂಘ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ (ರಿ), ಆಜಾದ್ ನಗರ, ಚಿತ್ರದುರ್ಗ ಈ ಸಂಸ್ಥೆಗಳಿಗೆ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಲು ಅನುಮತಿ ನೀಡಲಾಗಿರುವ ಮೇಲೆ ಕ್ರಮ ಸಂಖ್ಯೆ (01) & (02)ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲು ನಿರ್ಧರಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 05 ವಿಸೇಬಿ 2022, ದಿನಾಂಕ:01.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿನ **ಬೆಳಗಾವಿ ಹಾಗೂ ಕಲಬುರಗಿ** ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧೀನ ಕಛೇರಿಗಳಲ್ಲಿನ ಹಳೆಯ ಅನುಪಯುಕ್ತ ಸಾಮಾಗ್ರಿಗಳನ್ನು ಜಮುನಾ ವಿವಿದೋದ್ದೇಶಗಳ ಸಹಕಾರ ಸಂಘ ನಿ. ವಿಜಯಪುರ ಇವರಿಗೆ

ಎರಡು ವರ್ಷಗಳ ಅವಧಿಗೆ ವಿಲೇವಾರಿ ಮಾಡಲು ಅನುಮೋದನೆ ನೀಡರುವ **ಸರ್ಕಾದ ಆದೇಶ ಸಂಖ್ಯೆ:ಗ್ರಾಅಪ 153 ವಿಸೇಬಿ 2021, ದಿ:16.11.2021**ನ್ನು **ಹಾಗೂ ಬೆಂಗಳೂರು ಹಾಗೂ ಮೈಸೂರು ವಿಭಾಗಗಳ** ಅಧೀನದಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿನ ಅಧೀನ ಕಛೇರಿಗಳಲ್ಲಿನ ಹಳೆಯ ಅನುಪಯುಕ್ತ ಸಾಮಗ್ರಿಗಳನ್ನು ಅಖಿಲ ಕರ್ನಾಟಕ ಜನಸೇವಾ ಸಂಘ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ (ರಿ), ಆಜಾದ್ ನಗರ, ಚಿತ್ರದುರ್ಗ ಇವರಿಗೆ **02** ವರ್ಷಗಳ ಅವಧಿಗೆ ವಿಲೇವಾರಿ ಮಾಡಲು ಅನುಮೋದನೆ ನೀಡಿರುವ **ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 11 ವಿಸೇಬಿ 2021, ದಿ:25.11.2021**ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಿದೆ.

ಮುಂದುವರೆದು, ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಧೀನದಲ್ಲಿ ಬರುವ ಕಛೇರಿಗಳ ಅನುಪಯುಕ್ತ ಸಾಮಗ್ರಿಗಳನ್ನು ತಮ್ಮ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಸ್ಪರ್ಧಾತ್ಮಕ ದರಕ್ಕೆ ಅನುಗುಣವಾಗಿ ಇ-ಹರಾಜು ಮೂಲಕ ವಿಲೇವಾರಿ ಮಾಡಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಬಾಲಪ್ಪ)** 21/02/2022
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ.ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು-1.
2. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾಯನಿವಾಹಕ ಅಧಿಕಾರಿಗಳು.
3. ಅಧ್ಯಕ್ಷರು, ಅಖಿಲ ಕರ್ನಾಟಕ ಜನಸೇವಾ ಸಂಘ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ (ರಿ), ಆಜಾದ್ ನಗರ, ಚಿತ್ರದುರ್ಗ
4. ಕಾರ್ಯದರ್ಶಿ, ಜಮುನಾ ವಿವಿದೋದ್ದೇಶಗಳ ಸಹಕಾರ ಸಂಘ, ಎಂ ಎಫ್. ಬೇಗ್, ಧಖನಿ ಓಣಿ, ಸುರಪುರ, ಯಾದಗಿರಿ ಜಿಲ್ಲೆ.
5. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಸೂರ್, ಬೆಂಗಳೂರು.
6. ಉಪ ನಿರ್ದೇಶಕರು, ಖಜಾನೆ ನೆಟ್ ವರ್ಕ್, ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ ಸೌತ್ ಬ್ಲಾಕ್, ಖನಿಜ ಭವನ, ದೇವರಾಜು ಅರಸ್ ರಸ್ತೆ, ಬೆಂಗಳೂರು.
7. ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ಶಾಖಾ ರಕ್ಷಾಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರುಗಳಿಗೆ.